ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು

**PAPER CLIPPINGS**

ಶಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಪರಿಷತ್ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 9-12-2020

# ಜೆಡಿಎಸ್ ನಿಲುವು: ಚರ್ಚೆಗೆ ಗ್ರಾಸ

ಪರಿಷತ್‌ನಲ್ಲಿ ಮಂಗಳವಾರ ಒಪ್ಪಿಗೆ ಪಡೆದ ಭೂ ಸುಧಾರಣೆ ತಿದ್ದುಪಡಿ ವಿಧೇಯಕ ವಿಚಾರದಲ್ಲಿ ಜೆಡಿಎಸ್ ಭಿನ್ನನಿಲುವು ವ್ಯಕ್ತವಾಗಿರುವುದು ಚರ್ಚೆಗೆ ಗ್ರಾಸ ಒದಗಿಸಿದೆ. ವಿ.ಕ-9/12/20

ಜೆಡಿಎಸ್‌ನ ಹಿರಿಯ ಸದಸ್ಯ ಮರಿತಿಬ್ಬೇಗೌಡ ವಿಧೇಯಕವನ್ನು ಪ್ರಬಲವಾಗಿ ವಿರೋಧಿಸಿ ಮಾತನಾಡಿದರು. ವಿಧೇಯಕವನ್ನು ಮತ ಹಾಕಿದಾಗ ಮರಿತಿಬ್ಬೇಗೌಡ ವಿರೋಧಿಸಿದರೆ, ಅವರ ಪಕ್ಷದ ಉಳಿದ ಸದಸ್ಯರು ಪರವಾಗಿ ನಿಂತರು. ಈ ದ್ವಂದ್ವ ನಿಲುವು ಕಾಂಗ್ರೆಸ್‌ಗೂ ಅಚ್ಚರಿ ತಂದಿತು. ದೇಶದಲ್ಲಿ ನಡೆದಿರುವ ರೈತ ಹೋರಾಟಕ್ಕೆ ಜೆಡಿಎಸ್ ನಾಯಕರು ಬೆಂಬಲ ಘೋಷಿಸಿದ್ದಾರೆ. ಆದರೆ, ಸದನದ ಒಳಗೆ ಸರಕಾರಕ್ಕೆ ಸಾಥ್ ನೀಡಿದ್ದಾರೆ. ಈ ಭಿನ್ನನಿಲುವು ಏಕೆ ಎಂದು ವಿಧೇಯಕ ಪರ ನಿಂತಿದ್ದು ಏಕೆ ಎಂದು ಕಾಂಗ್ರೆಸ್ ಮುಖ್ಯಸಚೇತಕ ಎಂ.ನಾರಾಯಣಸ್ವಾಮಿ ಜೆಡಿಎಸ್ ಸದಸ್ಯರ ಕಾಲೆಳೆದರು.



**ಸಭಾಪತಿ ಪದಚ್ಯುತಿ ಮುಂದಕ್ಕೆ?:** ಜೆಡಿಎಸ್‌ನ ಈ ನಿಲುವು ಮುಂದೆ ಬರಲಿರುವ ಸಭಾಪತಿ ವಿರುದ್ಧದ ಅವಿಶ್ವಾಸ ನಿರ್ಣಯ ವೇಳೆ ಬಿಜೆಪಿ ಬೆಂಬಲಿಸುವ ಸುಳಿವು ನೀಡಿದೆ. ಹಾಲಿ ಸಭಾಪತಿ ಪ್ರತಾಪ್‌ಚಂದ್ರ ಶೆಟ್ಟಿ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಬಿಜೆಪಿಯು ಜೆಡಿಎಸ್ ಸಹಕಾರ ಕೋರಿದೆ. ಹಾಲಿ ಉಪ ಸಭಾಪತಿಯಾಗಿ ಜೆಡಿಎಸ್‌ನ ಧರ್ಮೇಗೌಡ ಕಾರ್ಯನಿರ್ವಹಿಸುತ್ತಿದ್ದಾರೆ. ಇವರನ್ನು ಹಾಗೆಯೆ ಉಳಿಸಿಕೊಂಡು ಸಭಾಪತಿ ಸ್ಥಾನಕ್ಕೆ ಬಿಜೆಪಿಯವರನ್ನು ಕೂರಿಸುವ ರಾಜಕೀಯ ತಂತ್ರಗಾರಿಕೆ ನಡೆದಿದೆ. ಈಗಾಗಲೇ ಬಿಜೆಪಿ ಅವಿಶ್ವಾಸ ನಿರ್ಣಯಕ್ಕೆ ನೋಟಿಸ್ ನೀಡಿದೆ. ಸದ್ಯದ ರಾಜಕೀಯ ಸ್ಥಿತಿಯಲ್ಲಿ ಗುರುವಾರ ಅಧಿವೇಶನ ಕೊನೆಗೊಳ್ಳುವ ಸಾಧ್ಯತೆ ಇದ್ದು, ಅಷ್ಟರೊಳಗೆ ಪ್ರತಾಪ್‌ಚಂದ್ರ ಶೆಟ್ಟಿ ಪದಚ್ಯುತಿ ಸಾಧ್ಯವೇ ಎಂಬ ಪ್ರಶ್ನೆಯೂ ಎದ್ದಿದೆ.

ಒಂದು ವೇಳೆ ಕಲಾಪ ಪಟ್ಟಿಯಲ್ಲಿ ಅವಿಶ್ವಾಸ ನಿರ್ಣಯದ ವಿಷಯ ಸೇರ್ಪಡೆಯಾಗದಿದ್ದಲ್ಲಿ ಸಭಾಪತಿ ಪದಚ್ಯುತಿಗೊಳಿಸಲು ಸಾಧ್ಯವಾಗದು. ಮುಂದಿನ ಜನವರಿ ಅಥವಾ ಫೆಬ್ರವರಿಯಲ್ಲಿ ನಡೆಯುವ ವಿಧಾನಮಂಡಲದ ಜಂಟಿ ಅಧಿವೇಶನದ ವರೆಗೂ ಬಿಜೆಪಿ ಕಾಯಬೇಕಾಗಿ ಬರಬಹುದು. ಈ ವಿಚಾರವಾಗಿ ಆಡಳಿತ ಬಿಜೆಪಿ ಹಾಗೂ ಪ್ರತಿಪಕ್ಷ ಕಾಂಗ್ರೆಸ್ ನಾಯಕರು ಬುಧವಾರ ಪ್ರತ್ಯೇಕವಾಗಿ ಸಭೆ ನಡೆಸಿ ತಂತ್ರಗಾರಿಕೆ ರೂಪಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.